MC No.37/2023

RW-2

**(ಇಂದು ದಿಃ 05-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಃ- ಎದುರುದಾರರ ಪರ ಶ್ರೀ. ಆರ್ ಎಮ್ ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ಅರ್ಜಿದಾರರ ಪರ ಶ್ರೀ. ಎನ್.ಆರ್. ವಕೀಲರಿಂದಃ-**

ಎದುರುದಾರಳು ಗರ್ಭವತಿಯಾದ ಸಂಗತಿ ಮದುವೆಯಾದ 2 ತಿಂಗಳಿಗೆ ಗೊತ್ತಾಗಿತ್ತು ಎಂದರೆ ಸರಿ. ಮದುವೆಯಾದ 2 ತಿಂಗಳಿಗೆ ಎದುರುದಾರಳನ್ನು ಅವಳ ತಾಯಿ ಮಳಿಖೇಡ ಆಸ್ಪತ್ರೆಗೆ ಹೊಟ್ಟೆ ನೋವಿನ ಸಲುವಾಗಿ ತೋರಿಸಲು ಹೋದಾಗ ಎದುರುದಾರಳು ಗರ್ಭವತಿ ಇದ್ದಾರೆ ಎಂದು ವೈದ್ಯರು ಹೇಳಿದರು ಎಂದು ಎದುರುದಾರರು ಅರ್ಜಿದಾರರಿಗೆ ತಿಳಿಸಿದರು ಎಂದರೆ ನನಗೆ ಗೊತ್ತಿಲ್ಲ. ಎದುರುದಾರರು ಗರ್ಭವತಿಯಾದದ್ದು ನನಗೆ ಯಾವಾಗ ಗೊತ್ತಾಯಿತು ಎಂದರೆ ನನಗೆ ಗೊತ್ತಾಗಿಲ್ಲ ಎಂದು ಹೇಳುತ್ತಾರೆ. ನಾನು ಎದುರುದಾರಳ ಸೋದರ ಅತ್ತೆ. ನಾನು ಬಿಜನಳ್ಳಿಯಲ್ಲಿ ವಾಸವಾಗಿದ್ದೇನೆ. ಹಳ್ಳಿಗಳಲ್ಲಿ ಮದುವೆ ನಿಶ್ಚಯ ಆದ ನಂತರ ಹುಡಗ ಹುಡಗಿ ಭೇಟಿ ಆಗುವುದಿಲ್ಲ ಎಂದರೆ ಸರಿಯಲ್ಲ. 1 ತಿಂಗಳ ಮುಟ್ಟು ನಿಂತುಹೋದರೆ ಗರ್ಭಿಣಿಯಾಗಿರುವುದು ತಿಳಿಯುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರು ಅರ್ಜಿದಾರನಿಗೆ ತಾನು ಗರ್ಭವತಿ ಎಂದು ಹೇಳಿದಾಗ ಆರುವರೆ ತಿಂಗಳು ಗರ್ಭವತಿಯಾಗಿದ್ದರು ಎಂದರೆ ಸರಿಯಲ್ಲ. ಎದುರುದಾರರು ಬೇರೆ ವ್ಯಕ್ತಿಯಿಂದ ಗರ್ಭವತಿಯಾಗಿದ್ದರಿಂದ ತಾನು ಗರ್ಭಿಣಿಯಾದ ಸಂಗತಿಯನ್ನು ಗಂಡನಿಗೆ ಮತ್ತು ಬೇರೆಯವರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಮದುವೆ ಮುಂಚೆ ಅರ್ಜಿದಾರ ಬಿಜನಳ್ಳಿಗೆ ಬರುತ್ತಿದ್ದ ಮತ್ತೆ ಎದುರುದಾರರಿಗೆ ಭೇಟಿಯಾಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ತಂದೆ ತಾಯಿ ಬಿಜನಳ್ಳಿಯಲ್ಲಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾಯಿ ಬೆಂಗಳೂರಿನಲ್ಲಿ ಮತ್ತು ತಂದೆ ಬಿಜನಳ್ಳಿಯಲ್ಲಿ

ವಾಸ ಇರುತ್ತಾರೆ ಎಂದು ಹೇಳುತ್ತಾರೆ. ಎದುರುದಾರರ ತಾಯಿಯ ಹೆಸರು ವಿಜಯಲಕ್ಷ್ಮಿ ವಿಜಯಲಕ್ಷ್ಮಿ ಬೆಂಗಳೂರಿನಲ್ಲಿ ಕೂಲಿ ಮಾಡುತ್ತಿದ್ದರು. ವಿಜಯಲಕ್ಷ್ಮಿ ಬೆಂಗಳೂರಿನಲ್ಲಿ ಇದ್ದಳು ಕಾರಣ ಎದುರುದಾರರು ಗರ್ಭಿಣಿಯಾದ ಸಂಗತಿ ಗೊತ್ತಾಗಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರ ಸೋದರ ಅತ್ತೆಯಾಗಿರುವ ಕಾರಣ ಅವಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**